ಕೆರಳಿಸುತ್ತದೆ. ಇಲ್ಲಿ ಒಬ್ಬ ಯುವ ಮಹಿಳೆ ವಾಸವಾಗಿದ್ದರು ಮಾತ್ರವಲ್ಲ, ಅವರು ಇಡೀ ಪ್ರಪಂಚವನ್ನು ಬೇಕಾದರೂ ಅದರೊಳಗೆ ಅವಕಾಶ ಮಾಡಿಕೊಡಬಲ್ಲವರಾಗಿದ್ದರು! ಅವರೇ ಶ್ರೀಮಾತೆ ಶಾರದಾದೇವಿ. ಶ್ರೀಮಾತೆಯವರು ಈ ಅತಿ ಚಿಕ್ಕ ಜಾಗದಲ್ಲಿ ಸುಮಾರು ೧೩ ವರ್ಷಗಳ ಕಾಲ, ೧೮೭೨ ರಿಂದ ೧೮೮೫ ರವರೆಗೆ, ವಾಸಮಾಡಿದರು.



ನಹಬತ್ತಿನ ನೆಲ ಅಂತಸ್ತಿನಲ್ಲಿ ಅಷ್ಟಭುಜಾಕಾರದ, ಬಹಳ ಕಡಮೆ ಎತ್ತರದ ಕೊಠಡಿಯೊಂದಿದೆ. ಅದು ೫೦ ಚದರಡಿಗಳಿಗಿಂತಲೂ ಕಡಮೆ ವಿಸ್ತೀರ್ಣ ಹೊಂದಿದೆ. ಅದರ ಸುತ್ತಲೂ ೪ . ೨೫ ಅಡಿಗಳಷ್ಟು ಅಗಲದ ವರಾಂಡ ಇದೆ. ಈ ನಹಬತ್, ಶ್ರೀಮಾತೆಯವರ ವಾಸದ ಕೊಠಡಿಯಾಗಿದ್ದುದು ಮಾತ್ರವಲ್ಲ, ಅವರ ಉಗ್ರಾಣದ ಕೊಠಡಿ, ಅಡುಗೆಯ ಮನೆ, ಸ್ವಾಗತ ಕೊಠಡಿ – ಇವೆಲ್ಲವೂ ಆಗಿತ್ತು. ಇಷ್ಟು ಸಣ್ಣ ಜಾಗದಲ್ಲಿ ಅಷ್ಟೊಂದು ಕೆಲಸಕಾರ್ಯಗಳು ನಡೆಯುತ್ತಿತ್ತೆಂಬುದು ನಿಜಕ್ಕೂ ಆಶ್ಚರ್ಯಕರ ವಿಷಯವೇ ಸರಿ. ಶ್ರೀಮಾತೆಯವರ ಸಹನೆ ಮತ್ತು ತಾಳ್ಮೆಗಳು ನಿಜಕ್ಕೂ ಅನುಪಮವೇ ಸರಿ! ಯಾವುದು ಬೇರೆಯವರಿಗೆ ಅಸಾಧ್ಯವೆಂದು ತೋರುತ್ತಿತ್ತೋ, ಅದು ಅವರಿಗೆ ಒಂದು ಸಮಸ್ಯೆಯೆಂದೇ ತೋರುತ್ತಿರಲಿಲ್ಲ. ಕಡೆಯ ದಿನಗಳಲ್ಲಿ ತಮ್ಮ ಸೋದರಸೊಸೆಯರಿಗೆ ಅವರು ಹೇಳುತ್ತಿದ್ದರು: "ಅಂಥ ಕೊಠಡಿಯಲ್ಲಿ ನಿಮಗೆ ಒಂದು ದಿನವೂ ಇರಲು ಆಗುತ್ತಿರಲಿಲ್ಲ." ಶ್ರೀಮಾತೆಯವರ ಅಮೃತಶಿಲೆಯ ಪುತ್ಥಳಿಯನ್ನು ಇಲ್ಲಿ ಇರಿಸಲಾಗಿದೆ.

*(ಮುಂದುವರಿಯುವುದು)*

## ಕನ್ನಡ ಸಾಹಿತ್ಯದಲ್ಲಿ ಶ್ರೀರಾಮಕೃಷ್ಣರು

# ಶ್ರೀರಾಮಕೃಷ್ಣ ಲೀಲಾಪ್ರಸಂಗ

**(ಪೂರ್ವಕಥೆ ಮತ್ತು ಬಾಲ್ಯಜೀವನ)**

**(*ಮೂಲ:* ಸ್ವಾಮಿ ಶಾರದಾನಂದ, *ಅನುವಾದ:* ಟಿ.ಎಸ್. ವೆಂಕಣ್ಣಯ್ಯ, *ಪ್ರಕಟನೆ:* ೧೯೨೩)**

### ಎನ್. ವೆಂಕಟೇಶಯ್ಯಂಗಾರ್ ಅವರ ಪೀಠಿಕೆಯಿಂದ

'ಶ್ರೀ ಶ್ರೀರಾಮಕೃಷ್ಣ ಪರಮಹಂಸರ ಚರಿತ್ರೆ' ಯ ಉಪೋದ್ಘಾತದಲ್ಲಿ ತಕ್ಕ ಪ್ರೋತ್ಸಾಹ ದೊರೆತರೆ 'ರಾಮಕೃಷ್ಣ ಲೀಲಾಪ್ರಸಂಗ', 'ಕಥಾಮೃತ', 'ಸ್ವಾಮಿ ಶಿಷ್ಯಸಂವಾದ', ಆಚಾರ್ಯರ ಜೀವನ ಚರಿತ್ರೆಗಳೇ ಮುಂತಾದ ಧಾರ್ಮಿಕ ಗ್ರಂಥಗಳನ್ನು ಭಾಷಾಂತರಮಾಡಿ ಮಾಸಪತ್ರಿಕೆಯ ರೂಪದಲ್ಲಿ ಕನ್ನಡಿಗರಿಗೆ ಒಪ್ಪಿಸುವೆವೆಂದು ಸೂಚಿಸಿದ್ದೆವು. ಪರಮಹಂಸರ ಚರಿತ್ರೆಯನ್ನು ಓದಿದವರಲ್ಲಿ ಕೆಲವರು ಮೇಲೆ ಕಂಡ ಮಾಸಪತ್ರಿಕೆಯು ಹೊರಡುವ ವಿಚಾರದಲ್ಲಿ ಬಹಳವಾಗಿ ಕುತೂಹಲವನ್ನು ತೋರಿಸಿದ್ದಾರೆ. ಇವರಂತೆ ಇನ್ನೂ ಅನೇಕರಿಗೆ ಇದೇ ವಿಧವಾದ ಕುತೂಹಲವಿರಬಹುದೆಂದು ಊಹಿಸಿ, ಆ ಕೆಲಸವನ್ನು ಸಾಧ್ಯವಾದಷ್ಟು ಬೇಗ ಆರಂಭಿಸಬೇಕೆಂದು ಉದ್ದೇಶಿಸಿರುತ್ತೇವೆ ಎಂಬುದಾಗಿ ಒಂದು ವರುಷಕ್ಕೆ ಹಿಂದೆಯೇ ಪ್ರಕಟನಾ ಪತ್ರದ ಮೂಲಕ ತಿಳಿಸಿದ್ದೆವು. ಆದರೆ ಅನೇಕ ಕಾರಣಗಳಿಂದ ಕಾರ್ಯವನ್ನು ಒಡನೆಯೇ ಕೈಕೊಳ್ಳಲು ಸಾಧ್ಯವಾಗದೆ ಹೋದುದಕ್ಕಾಗಿ ವಿಷಾದಿಸುತ್ತೇವೆ. ಅದೇ ಪ್ರಕಟನಾಪತ್ರದಲ್ಲಿ ಪತ್ರಿಕೆಯನ್ನು ಎರಡು ತಿಂಗಳಿಗೊಂದು ಸಂಚಿಕೆಯಂತೆ ಪ್ರಕಟಿಸಬೇಕೆಂದಿದ್ದೇವೆಂದು ಸೂಚಿಸಿದ್ದ ಉದ್ದೇಶವನ್ನನುಸರಿಸಿ ಈಗ ಆ ದ್ವೈಮಾಸಿಕ ಪತ್ರಿಕೆಯ ಮೊದಲನೆಯ ಸಂಚಿಕೆಯನ್ನು ಶ್ರೀರಾಮಕೃಷ್ಣ ಪರಮಹಂಸರ ಜಯಂತ್ಯುತ್ಸವಕಾಲಕ್ಕೆ ಹೊರಡಿಸಲಾಗಿದೆ. ಇದರಲ್ಲಿ ಶ್ರೀ ಶರಚ್ಚಂದ್ರ ಚಕ್ರವರ್ತಿಯವರ 'ಸ್ವಾಮಿ ಶಿಷ್ಯಸಂವಾದ', ಸ್ವಾಮಿ ಶಾರದಾನಂದರವರ 'ಶ್ರೀರಾಮಕೃಷ್ಣ ಲೀಲಾಪ್ರಸಂಗ', ಇವೆರಡು ಗ್ರಂಥಗಳ ಭಾಷಾಂತರವನ್ನು ಪ್ರಾರಂಭಿಸಿದೆ. ಇವುಗಳಲ್ಲಿ ಮೊದಲನೆಯದರಿಂದ ಭರತಖಂಡಕ್ಕೆ ಸಂಬಂಧಪಟ್ಟ ಧಾರ್ಮಿಕ, ಸಾಮಾಜಿಕ ಮುಂತಾದ ನಾನಾ ವಿಚಾರಗಳ ವಿಷಯದಲ್ಲಿ ಸ್ವಾಮಿ ವಿವೇಕಾನಂದರವರಿಂದ ಉಕ್ತವಾದ ಅಭಿಪ್ರಾಯಗಳೂ, ಎರಡನೆಯದರಿಂದ ಪರಮಹಂಸರ ಧಾರ್ಮಿಕ ಜೀವನ, ಉಚ್ಚಾದರ್ಶ, ಸದ್ಬೋಧನೆ ಮುಂತಾದವುಗಳೂ ಸ್ಪಷ್ಟವಾಗಿ ಗೊತ್ತಾಗುತ್ತವೆ... 'ಸ್ವಾಮಿ ಶಿಷ್ಯಸಂವಾದ'ದ ಪರಿವರ್ತನಕಾರರು, ಮೈಸೂರು ಓರಿಯಂಟಲ್ ಲೈಬ್ರೆರಿಯ ಕನ್ನಡ ಸ್ಪೆಷಲಿಸ್ಟ್ ಮ॥ ರಾ॥ ಎ. ಆರ್. ಕೃಷ್ಣಶಾಸ್ತ್ರಿ, ಎಂ. ಎ., ಅವರು; 'ಶ್ರೀರಾಮಕೃಷ್ಣ ಲೀಲಾಪ್ರಸಂಗ'ದ ಪರಿವರ್ತನಕಾರರು, ಬೆಂಗಳೂರು ಸೆಂಟ್ರಲ್ ಕಾಲೇಜಿನ ಕನ್ನಡ ಅಧ್ಯಾಪಕರಾದ ಮ॥ ರಾ॥ ಟಿ. ಎಸ್. ವೆಂಕಣ್ಣಯ್ಯ, ಎಂ. ಎ. ಅವರು, ಎಂಬ ವಿಷಯವನ್ನು ವಾಚಕರಿಗೆ ತಿಳಿಸಲು ನಮಗೆ ಸಂತೋಷವು.

(೨ನೆಯ ಮಾರ್ಚಿ, ೧೯೨೨ ಬೆಂಗಳೂರು)

# ಪುಷ್ಪ ೩ – ಸ್ವಾಮಿ ಪ್ರೇಮಾನಂದರು

ಡಾ. ಕೆ. ಅನಂತರಾಮು

**ಪ**ಶ್ಚಿಮ ಬಂಗಾಳದ ಹೂಗ್ಲಿ ಜಿಲ್ಲೆಯಲ್ಲಿ ಆಂಟ್‌ಪುರ ಎಂಬೊಂದು ಗ್ರಾಮವಿದೆ. ಅಲ್ಲಿ ತಾರಾಪ್ರಸನ್ನ ಘೋಷ್ ಮತ್ತು ಮಾತಂಗಿನೀದೇವಿ ಎಂಬ ಸಿರಿವಂತ ಕಾಯಸ್ಥ ದಂಪತಿಗಳಿದ್ದರು. ಅವರು ತಮ್ಮ ಮನೆದೇವರಾದ ಲಕ್ಷ್ಮೀನಾರಾಯಣನನ್ನು ಅನನ್ಯ ಭಕ್ತಿಯಿಂದ ಆರಾಧಿಸುತ್ತಿದ್ದರು. ಅವರಿಗೆ ಕೃಷ್ಣಭವಾನಿಯೆಂಬ ಹೆಣ್ಣುಮಗಳೂ ತುಳಸೀರಾಮ, ಬಾಬುರಾಮ, ಶಾಂತಿರಾಮ ಎಂಬ ಮೂವರು ಗಂಡುಮಕ್ಕಳೂ ಇದ್ದರು. ಅವರಲ್ಲಿ ಬಾಬುರಾಮ ಘೋಷರೇ ನಮ್ಮ ಕಥಾನಾಯಕರು. ಅವರೇ ಪ್ರೇಮಾನಂದರು. ೧೮೬೧, ಡಿಸೆಂಬರ್ ೧೦ರಂದು ಅವರ ಜನನವಾಯಿತು. ಹುಟ್ಟಿನಿಂದಲೇ ಅವರು ಭಕ್ತಿ ತ್ಯಾಗ ವೈರಾಗ್ಯಗಳನ್ನು ತುಂಬಿಕೊಂಡು ಬಂದಿದ್ದರು. “ಬಾಬುರಾಮನಲ್ಲಿ ಮಲಿನತೆಯೆಂಬುದು ಎಳ್ಳುಮೊನೆಯಷ್ಟೂ ಇಲ್ಲ. ಅವನು ಅಪರಂಜಿಯಿದ್ದಂತೆ, ಅವಲೋಹದ ಸೋಂಕಿಲ್ಲ. ಅವನು ಪ್ರೇಮದೇವತೆಯಾದ ರಾಧೆಯ ಅಂಶಸಂಭೂತನಾಗಿದ್ದಾನೆ. ಅವನು ಸ್ವಲ್ಪ ಪರಿಶ್ರಮಪಟ್ಟರೂ ಸಾಕು, ಅವನ ಅಂತರಾಳದ ಆಧ್ಯಾತ್ಮಿಕಪ್ರಜ್ಞೆ ಪುಟಿದೇಳುತ್ತದೆ” ಎಂದು ಪರಮಹಂಸರು ತಮ್ಮ ಯೋಗದೃಷ್ಟಿಯಿಂದ ನಿರ್ಣಯಿಸಿ ಹೇಳಿಬಿಟ್ಟಿದ್ದರು.

### ಬೆಳೆಯುವ ಸಿರಿ

ಪ್ರೇಮಾನಂದರು ಸ್ವಗ್ರಾಮದಲ್ಲಿಯೇ ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿಕೊಂಡರು. ಮಂದಹಾಸ ಭರಿತವಾದ ಮುಖಮಂಡಲದಿಂದಲೂ, ದಟ್ಟವಾದ ಕರಿಗೂದಲಿನಿಂದಲೂ, ಬಂಗಾರದ ಮೈಬಣ್ಣದಿಂದಲೂ ಅವರು ಶೋಭಿಸುತ್ತಿದ್ದರು. “ಏನು ಚೆಲುವಚೆನ್ನಿಗನಿವನು, ಮುದ್ದಿನ ಸೊಕ್ಕೇ ಸರಿ, ಈಗ ಮದುವೆ ಮಾಡಿಬಿಡೋಣ” ಎಂದು ಯಾರಾದರೂ ವಿನೋದಕ್ಕೆ ಹೇಳದರೂ ಸಾಕು, ಅವರು ಉರಿದುಬೀಳುತ್ತಿದ್ದರು. “ಆ ಮಾತುಗಳನ್ನೆಲ್ಲ ನನ್ನ ಮುಂದೆ ಆಡಬೇಡಿ. ನಾನು ಮದುವೆಯಾಗುವುದಿಲ್ಲ. ನೀವೇನಾದರೂ ಬಲವಂತಮಾಡಿದರೆ ನಾನು ಸತ್ತುಹೋಗುತ್ತೇನೆ” ಎಂದು ಗುಡುಗಿಬಿಡುತ್ತಿದ್ದರು. ಗ್ರಾಮದಲ್ಲಾಗಲಿ, ಶಾಲೆಯಲ್ಲಾಗಲಿ ಅವರು ಎಲ್ಲರ ಆಕರ್ಷಣೆಯ ಕೇಂದ್ರಬಿಂದುವಾಗಿದ್ದರು.



ಪ್ರೌಢಶಾಲೆಯ ವಿದ್ಯಾಭ್ಯಾಸಕ್ಕೆಂದು ಪ್ರೇಮಾನಂದರು ಕೊಲ್ಕತಾಗೆ ಬಂದರು. ತಮಗೊಬ್ಬ ಸದ್ಗುರು ಬೇಕು ಎಂದು ಅವರ ಮನಸ್ಸು ತುಡಿಯುತ್ತಲೇ ಇತ್ತು. ತಮ್ಮ ಶಾಲೆಯ ಜೊತೆಗಾರ ರಾಖಾಲನೊಡನೆ ಒಂದು ಶನಿವಾರದ ದಿನ ದಕ್ಷಿಣೇಶ್ವರಕ್ಕೆ ಪರಮಹಂಸರ ದರ್ಶನಕ್ಕೆಂದು ಹೋದರು. ಆಗಲೇ ರಾತ್ರಿಯಾಗಿತ್ತು. “ಬಾ, ಹತ್ತಿರ ಹತ್ತಿರ ಬಾ, ಈ ಮಿಣುಕುದೀಪದ ಬೆಳಕಿನಲ್ಲೊಮ್ಮೆ ನಿನ್ನ ಮುಖವನ್ನು ನೆಮ್ಮದಿಯಿಂದ ನೋಡುತ್ತೇನೆ” ಎಂದು ಪರಮಹಂಸರು ಕೈಹಿಡಿದು ಅವರನ್ನು ಬರಮಾಡಿಕೊಂಡರು. ಮುಖವನ್ನು ಮಾತ್ರವಲ್ಲದೆ ಅಂಗೋಪಾಂಗಗಳನ್ನೆಲ್ಲ ವಿವರವಾಗಿ ನೋಡಿದರು. ಅವರ ಬಲಗೈಯನ್ನು ತಮ್ಮ ಎಡಹಸ್ತದ ಮೇಲಿರಿಸಿಕೊಂಡು ತೂಗಿದರು. “ನೀನು ಸರ್ವಲಕ್ಷಣಸಂಪನ್ನನಪ್ಪಾ, ನಿನ್ನ ಕೈ ಹಗುರವಾಗಿದೆ. ಅದು ಪರೋಪಕಾರಪ್ರಿಯತೆಯ ಲಕ್ಷಣ” ಎಂದು ಕೊಂಡಾಡಿದರು. ಹೀಗೆಯೇ ಮೇಲಿಂದಮೇಲೆ ದಕ್ಷಿಣೇಶ್ವರಕ್ಕೆ ಹೋಗಿಬರುತ್ತ ಪ್ರೇಮಾನಂದರು ಪರಮಹಂಸರ ಪ್ರೇಮಪಾಶದಿಂದ ಬಂಧಿತರಾಗಿಬಿಟ್ಟರು.

### ಹೊಸಮಡಕೆಯಲ್ಲಿಟ್ಟ ಹಾಲು

“ಬಾಬುರಾಮನು ಶುದ್ಧಹೃದಯನಾಗಿದ್ದಾನೆ. ಹೀನಭಾವಗಳು ಅವನ ದೇಹೇಂದ್ರಿಯಮನೋಬುದ್ಧಿಗಳನ್ನು ಪ್ರವೇಶ ಮಾಡಿಲ್ಲ. ಅವನು ಹೊಸಮಡಕೆಯ ಹಾಗೆ. ಅದರಲ್ಲಿಟ್ಟ ಹಾಲು ಹುಳಿಯಾಗುವುದಿಲ್ಲ. ಅವನು ನನ್ನ ಅಂಗರಕ್ಷಕನಾಗಿ ನನ್ನೊಡನೆ ಇರಬೇಕಾದ ಅಗತ್ಯವಿದೆ” ಎಂದು ಪರಮಹಂಸರು ಹೇಳುತ್ತಿದ್ದರು. ಪ್ರೇಮಾನಂದರ ತಾಯಿ ಮಾತಂಗಿನೀದೇವಿ

ಕೂಡ ಶ್ರೀರಾಮಕೃಷ್ಣರ ಪರಮಭಕ್ತೆಯೇ ಆಗಿದ್ದುದು ದೈವಸಂಕಲ್ಪವೆಂಬಂತೆ ಕೂಡಿಕೊಂಡಿದ್ದು, ಅದು ಪ್ರೇಮಾನಂದರ ಅಧ್ಯಾತ್ಮಮಾರ್ಗವು ಪ್ರಶಸ್ತವಾಗಲು ದಾರಿದೀಪವಾಯಿತು.

ಒಂದುದಿನ ಮಾತಂಗಿನೀದೇವಿಯು ಆಂಟ್‌ಪುರದಿಂದ ಪರಮಹಂಸರ ದರ್ಶನಕ್ಕೆಂದು ದಕ್ಷಿಣೇಶ್ವರಕ್ಕೆ ಬಂದಳು. ಆಗ ಪರಮಹಂಸರು, "ತಾಯೇ, ನಾನು ಕೇಳಿದ್ದನ್ನು ನೀನು ಕೊಡುತ್ತೀಯಾ?" ಎಂದು ಇದ್ದಕ್ಕಿದ್ದಂತೆ ಪ್ರಶ್ನಿಸಿದರು. ಏನು ಕೇಳುತ್ತಾರೆಂಬುದರ ಅರಿವಿಲ್ಲದ ಆಕೆಯು, "ಆಗಲಿ ಸ್ವಾಮಿ, ನೀವೇನು ಕೇಳಿದರೂ ಖಂಡಿತವಾಗಿ ಕೊಡುತ್ತೇನೆ" ಎಂದು ಮಾತುಕೊಟ್ಟಳು. ಆಗ ಪರಮಹಂಸರು, "ಹಾಗಾದರೆ ಶುದ್ಧಹೃದಯದ ನಿನ್ನ ಮಗ ಬಾಬುರಾಮನನ್ನು ನನಗೆ ಕೊಡು, ಅವನೊಂದು ಲೋಟ ನೀರು ತಂದುಕೊಟ್ಟರೂ ಅವನ ಸೇವೆಯಿಂದ ನಾನು ತೃಪ್ತನಾಗುತ್ತೇನೆ" ಎಂದರು. ಮಗನ ಆಧ್ಯಾತ್ಮಿಕ ಒಲವನ್ನು ಅರಿತಿದ್ದ ಮಾತಂಗಿನೀದೇವಿಯು, "ಹಾಗೆಯೇ ಆಗಲಿ ಸ್ವಾಮಿ, ಅವನನ್ನು ನಿಮಗೊಪ್ಪಿಸುವುದು ನನ್ನ ಬದುಕಿನ ಪುಣ್ಯವೆಂದೇ ಭಾವಿಸುತ್ತೇನೆ. ಆದರೆ ಅದಕ್ಕೆ ಪ್ರತಿಯಾಗಿ ನೀವು ನನಗೆ ಎರಡು ವರಗಳನ್ನು ಕರುಣಿಸಬೇಕು" ಎಂದು ಬೇಡಿಕೊಂಡಳು. ಪರಮಹಂಸರು 'ತಥಾಸ್ತು' ಎಂದಾಗ ಮಾತಂಗಿನಿಯು, "ಭಗವಂತನ ವಿಷಯದಲ್ಲಿ ಅಚಲವಾದ ಭಕ್ತಿ ನನಗುಂಟಾಗಬೇಕು, ನನ್ನ ಮಕ್ಕಳಲ್ಲಿ ಯಾರೂ ನನ್ನ ಕಣ್ಣ ಮುಂದೆ ಸಾವನ್ನಪ್ಪಬಾರದು" ಎಂದು ಕೇಳಿಕೊಂಡಳು. ಮತ್ತೊಮ್ಮೆ ಪರಮಹಂಸರು ಸಂತುಷ್ಟರಾಗಿ 'ತಥಾಸ್ತು' ಎಂದರು. ಸತ್ಯಸಂಕಲ್ಪರು ಕೊಟ್ಟ ವರ ಭವಿಷ್ಯದಲ್ಲಿಯೂ ಹುಸಿಯಾಗಲಿಲ್ಲ. ಇದು ನಡೆದಾಗ ಪ್ರೇಮಾನಂದರಿಗೆ ೨೦ ವರ್ಷ ವಯಸ್ಸಾಗಿತ್ತು.

## ಸದ್ಗುರುವಿನ ಸೇವಾಯೋಗ

ಆಧ್ಯಾತ್ಮಿಕ ಸೆಳೆತದಿಂದ ಪ್ರೇಮಾನಂದರು ಶಾಲೆಯ ಪಾಠಗಳಿಗೆ ಗಮನಕೊಡದೆ ಎಂಟ್ರೆನ್ಸ್ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿಬಿಟ್ಟರು. ಆಗ ಪರಮಹಂಸರು, "ಒಳ್ಳೆಯದೇ ಆಯಿತು. ಎರಡರಲ್ಲಿ ಒಂದನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬೇಕು. ಅಲ್ಲಿ ಫೇಲಾಗಿದ್ದೀಯೆ, ಇಲ್ಲಿ ಪಾಸಾಗುತ್ತೀಯೆ, ಪಾಶಮುಕ್ತನಾಗುತ್ತೀಯೆ" ಎಂದು ಹೇಳುತ್ತ ಹರ್ಷಚಿತ್ತರಾದರು.

ಪರಮಹಂಸರೊಡನೆ ವಾಸಮಾಡುವುದೇ ಪ್ರೇಮಾನಂದರಿಗೆ ಬಹುದೊಡ್ಡ ಆಧ್ಯಾತ್ಮಿಕ ಶಿಕ್ಷಣವಾಗಿತ್ತು. "ಅವರು ಎಷ್ಟು ಪರಿಶುದ್ಧರೆಂದರೆ, ಅವರು ನೋಡಿದ ದಿಕ್ಕುಗಳಲ್ಲಿರುವ ಎಲ್ಲ ವಸ್ತುಗಳೂ ಶುದ್ಧವಾಗಿಬಿಡುತ್ತವೆ" ಎನ್ನುವಂಥ ಪರಿಶುದ್ಧತೆಯ ಮಟ್ಟಕ್ಕೆ, ತ್ಯಾಗಶೀಲತೆಯ ಮಟ್ಟಕ್ಕೆ ಪ್ರೇಮಾನಂದರು ಏರಿಬಿಟ್ಟರು. ಪರಮಹಂಸರು ಸಮಾಧಿಸ್ಥಿತಿಯಲ್ಲಿರುವಾಗ ಅವರು ಬಿದ್ದು ಪೆಟ್ಟು ಮಾಡಿಕೊಳ್ಳದಂತೆ ಜೋಪಾನವಾಗಿ ಹಿಡಿದು ನಡೆಸಿಕೊಂಡು ಬರಬೇಕಾಗುತ್ತಿತ್ತು. ಆದರೆ ಆ ಸ್ಥಿತಿಯಲ್ಲಿ ಯಾರುಯಾರೋ ಅವರ ಶರೀರವನ್ನು ಮುಟ್ಟುವಂತಿರಲಿಲ್ಲ. ಆಯ್ಕೆಯಾದ ಕೆಲವರು ಮಾತ್ರವೇ ಅವರ ಮೈಮುಟ್ಟಿ ಉಪಚರಿಸಬಹುದಾಗಿತ್ತು. ಹಾಗೆ ಆಯ್ಕೆಯಾಗಿದ್ದವರಲ್ಲಿ ಪ್ರೇಮಾನಂದರು ಪ್ರಮುಖರಾಗಿದ್ದರು.

ಪರಮಹಂಸರಿಗೆ ಹಾಸುಗೆ ಹಾಸಿಕೊಡುವುದು, ಸ್ನಾನ ಮಾಡಿಸುವುದು, ಎಣ್ಣೆ ತಿಕ್ಕಿಕೊಡುವುದು, ತಾಂಬೂಲ–ಗುಡುಗುಡಿಗಳನ್ನು ಅಣಿಮಾಡಿಕೊಡುವುದು, ಗಾಳಿ ಬೀಸುವುದು, ಅವರು ಹೋದೆಡೆಗಳಿಗೆ ಅವರ ಪರಿಚಾರಕರಾಗಿ ಹೋಗುವುದು – ಮುಂತಾಗಿ ಪ್ರೇಮಾನಂದರು ಆ ಸದ್ಗುರುವಿನ ಸೇವೆಯನ್ನು ಸರ್ವವಿಧಗಳಲ್ಲಿಯೂ ಮಾಡಿದರು. "ಈ ಸಂಸಾರದಿಂದ ನನ್ನನ್ನು ಮೇಲೆತ್ತಿಕೊಂಡುಬಿಡಿ, ಠಾಕೂರ್" ಎಂದು ಪ್ರೇಮಾನಂದರು ಬೇಡಿದ್ದಕ್ಕೆ ಪರಮಹಂಸರು, "ಹಾಗೆಯೇ ಆಗಲಪ್ಪಾ, ನೀನು ನನ್ನ ಜೀವದ ಗೆಳೆಯನಲ್ಲವೆ" ಎಂದರು.

ಒಮ್ಮೆ ಕೊಲ್ಕತಾದ ಬಲರಾಮನೆಂಬ ಭಕ್ತನ ಮನೆಗೆ ಪರಮಹಂಸರೊಡನೆ ಹೋಗಿದ್ದಾಗ ಪ್ರೇಮಾನಂದರು ಮನೆಯ ಮುಂದೆ ಅವರ ಕೈ ತೊಳೆಸುತ್ತಿದ್ದರು. ಆಗ ಮಹಡಿಯ ಮೇಲೆ ಕೆಲವರು ಬಾಲೆಯರು ಸುಖಸಂಕಥಾವಿನೋದದಲ್ಲಿದ್ದರು. ಅವರಲ್ಲಿ ಒಬ್ಬಾಕೆ ತನ್ನ ಸೀರೆಯ ಸೆರಗಿನಂಚಿಗೆ ಕಟ್ಟಿದ್ದ ಬೀಗದಕೈ ಗೊಂಚಲನ್ನು ಗಿರಿಗಟ್ಟಳೆಯಂತೆ ತಿರುಗಿಸುತ್ತಿದ್ದಳು. ಅದನ್ನೊಮ್ಮೆ ದಿಟ್ಟಿಸಿದ ಪರಮಹಂಸರು, "ಅಲ್ಲಿ ನೋಡು, ಆ ಬೀಗದಕೈ ಗೊಂಚಲನ್ನು ಹೇಗೋ ಹಾಗೆಯೇ ಆ ಹುಡುಗಿಯರು ಯುವಕರನ್ನೂ ತಮ್ಮ ಮೋಡಿಯಿಂದ ತಿರುಗಿಸುತ್ತಾರೆ. ಅಂತಹ ಸಂಕಟದಿಂದ ನೀನು ಪಾರಾಗಿಬಿಟ್ಟೆಯಲ್ಲವೇ" ಎಂದು ಉದ್ಗರಿಸಿದರು.

## ಸದ್ಗುರುವಿನ ಅನುಗ್ರಹ

"ನೀವು ಕೋತಿಗಳು, ನಾನು ಕೋತಿ ಕುಣಿಸುವವನು, ಸೊಂಟಕ್ಕೊಂದು ಹಗ್ಗ ಕಟ್ಟಿದ್ದೇನೆ. ನಿಮ್ಮ ಕೋತಿಚೇಷ್ಟೆ ಹೆಚ್ಚಾದರೆ ಹಗ್ಗವನ್ನು ಜಗ್ಗುತ್ತೇನೆ" ಎಂದು ಪರಮಹಂಸರು ಹೇಳುತ್ತಿದ್ದರು. ಶಿಷ್ಯರ ಗುಣ ಸ್ವಭಾವ ಯೋಗ್ಯತೆಗಳಿಗೆ ಅನುಗುಣವಾಗಿ ಅವರಿಗೆ ಬೇಕಾಗುವ ಪಾಠಗಳನ್ನು ವಿವಿಧ ಉಪಾಯಗಳಿಂದ ಬೋಧಿಸುತ್ತಿದ್ದರು. ಇತರರಲ್ಲಿ ದೋಷಗಳನ್ನು ಹುಡುಕಬಾರದು, ನಮ್ಮಲ್ಲಿ ದೋಷಗಳೇನಿವೆ ಎಂದು ಹುಡುಕಿಕೊಳ್ಳಬೇಕು; ಎಲ್ಲ ಕೆಲಸಗಳನ್ನೂ

ಪರಿಷ್ಕಾರವಾಗಿ ಮಾಡಬೇಕು; ಆಗಾಗ ಪವಿತ್ರ ಗ್ರಂಥಗಳನ್ನು ಓದಬೇಕು; ಪ್ರಾಪಂಚಿಕ ಸುಖದಲ್ಲಿ ಹುರುಳಿಲ್ಲವೆಂಬುದನ್ನು ಅರಿಯಬೇಕು – ಎಂಬಿತ್ಯಾದಿ ಪಾಠಗಳನ್ನು ಪ್ರೇಮಾನಂದರು ಸದ್ಗುರುವಿನ ಸನ್ನಿಧಿಯಲ್ಲಿ ಕಲಿತರು.

ಒಂದುದಿನ ಗೆಳೆಯರೊಡನೆ ಹರಟುತ್ತಿದ್ದಾಗ ಪ್ರೇಮಾನಂದರು ಯಾವುದೋ ಒಂದು ಸುಳ್ಳನ್ನು ಹೇಳಿಬಿಟ್ಟರು. ಅದೇನೂ ತಲೆಹೋಗುವಂಥದಾಗಿರಲಿಲ್ಲ. ಆದರೂ ಆ ದಿನ ಪರಮಹಂಸರಿಗೆ ಅವರಿಂದ ತಮ್ಮ ಮೈ ಮುಟ್ಟಿಸಿಕೊಳ್ಳುವುದೂ ಸಾಧ್ಯವಾಗಲಿಲ್ಲ. ಆ ಘಟನೆಯಿಂದ ಪ್ರೇಮಾನಂದರು ವಿನೋದಕ್ಕಾಗಿಯಾದರೂ ಸರಿಯೆ, ಸುಳ್ಳು ಹೇಳಬಾರದು ಎಂಬ ಪಾಠವನ್ನು ಕಲಿತುಕೊಂಡರು. ಲೋಕದಲ್ಲಿರುವ ಎಲ್ಲ ವಸ್ತುಗಳೂ ನಮಗೆ ಭಯವನ್ನೇ ಉಂಟುಮಾಡುತ್ತವೆ, ವೈರಾಗ್ಯವೊಂದು ಮಾತ್ರ ನಿರ್ಭಯತೆಯನ್ನು ತುಂಬುತ್ತದೆ ಎಂಬ ತತ್ತ್ವವನ್ನು ಅವರು ಸದ್ಗುರುವಿನ ಸಂಗದಲ್ಲಿ ಮನದಟ್ಟು ಮಾಡಿಕೊಂಡರು. ಪರಮಹಂಸರಿಗೆ ಗಂಟಲು ಕ್ಯಾನ್ಸರ್ ತಗುಲಿದ ಮೇಲೆ ಪ್ರೇಮಾನಂದರು ಕಾಶಿಪುರದಲ್ಲಿ ಅವರೊಡನೆ ವಾಸಮಾಡುತ್ತ ಅವರ ಸೇವೆ, ಶುಶ್ರೂಷೆಗಳನ್ನು ಮನದಣಿಯೆ ಮಾಡಿದರು. ಆ ಅವಧಿಯಲ್ಲಿಯೇ (೧೮೮೫) ಅವರಿಗೆ ಸದ್ಗುರುವಿನ ಅಮೃತಹಸ್ತದಿಂದಲೇ ಕಾವಿವಸ್ತ್ರ, ರುದ್ರಾಕ್ಷಿಮಾಲೆಗಳು ಲಭ್ಯವಾದುವು.

## ಬಾಬುರಾಮರು ಪ್ರೇಮಾನಂದರಾದರು

ಪರಮಹಂಸರು ದೇಹತ್ಯಾಗಮಾಡಿದ ಬಳಿಕ (೧೬–೦೮–೧೮೮೬) ಪ್ರೇಮಾನಂದರು ತಮ್ಮ ಜೊತೆಗಾರ ಸಂನ್ಯಾಸಿಗಳಿದ್ದ ವರಾಹನಗರದ ಮಠವನ್ನು ಸೇರಿಕೊಂಡರು. ವಿವೇಕಾನಂದರ ನೇತೃತ್ವದಲ್ಲಿ ವಿರಜಾಹೋಮಾದಿಗಳನ್ನು ಮಾಡಿಕೊಂಡು ಶಾಸ್ತ್ರವು ಹೇಳಿರುವ ಪರಿಯಲ್ಲಿ ಸಂನ್ಯಾಸದೀಕ್ಷೆಯನ್ನು ಪಡೆದುಕೊಂಡರು. ಪ್ರೇಮದೇವತೆ ರಾಧೆಯ ಅಂಶಜರೆಂದು ಕೀರ್ತಿತರಾಗಿದ್ದುದರಿಂದ ವಿವೇಕಾನಂದರು ಅವರಿಗೆ 'ಪ್ರೇಮಾನಂದ' ಎಂಬ ಆಶ್ರಮನಾಮವನ್ನಿತ್ತರು. ಆ ಮಠದಲ್ಲಿ ಕಠಿಣತಮ ತಪೋಜೀವನದ ಜೊತೆಗೆ ಪ್ರೇಮಾನಂದರು ಪರಮಹಂಸರ ನಿತ್ಯಪೂಜಾಕೈಂಕರ್ಯವನ್ನು ತಾವೇ ನೆರವೇರಿಸುತ್ತಿದ್ದರು. ಒಂದು ದಿನ ಹೂಕೊಯ್ಯುವಾಗ ಮರದಿಂದ ಬಿದ್ದು ಅವರ ಬಲಗೈಮೂಳೆ ಮುರಿದುಹೋಯಿತು. ಸದ್ಗುರುವಿನ ಸ್ಮರಣೆಯಲ್ಲಿ ಆ ನೋವನ್ನೆಲ್ಲ ಮರೆತು ಗುಣಮುಖರಾದರು.

## ಪುರಿಕ್ಷೇತ್ರದಲ್ಲಿ ಹರಿಬೋಲ್

ತೀರ್ಥಯಾತ್ರೆಯೆಂಬುದು ಅಧ್ಯಾತ್ಮಸಾಧನೆಗೆ ಪೂರಕವಾದುದರಿಂದ ಪ್ರೇಮಾನಂದರು ಸಾಕಷ್ಟು ದಿವ್ಯಕ್ಷೇತ್ರಗಳನ್ನು ಸುತ್ತಿಬಂದರು. ಪುರಿಕ್ಷೇತ್ರಕ್ಕೆ ಹೋಗಿದ್ದಾಗ (೧೯೦೬) ಜಗನ್ನಾಥ ದೇವಾಲಯದ ಎದುರಿನಲ್ಲಿಯೇ, ಹಿಂದೂಗಳ ಮಧ್ಯದಲ್ಲಿಯೇ, ಕ್ರೈಸ್ತಪಾದ್ರಿಯೊಬ್ಬನು ಹಿಂದೂಧರ್ಮವನ್ನು ಮನಬಂದಂತೆ ಬೈಯುತ್ತಿದ್ದನು. ಪ್ರೇಮಾನಂದರಿಗೆ ಅದನ್ನು ಸಹಿಸಿಕೊಳ್ಳಲಾಗಲಿಲ್ಲ. ಒಡನೆಯೇ 'ಹರಿಬೋಲ್, ಹರಿಬೋಲ್' ಎಂದು ಭಗವನ್ನಾಮವನ್ನು ಉಚ್ಚಕಂಠದಲ್ಲಿ ಘೋಷಣೆ ಮಾಡತೊಡಗಿದರು. ಆಗ ಮಿಕ್ಕವರೂ ಕೂಡಿಕೊಂಡರು. ಆ ನಾಮಘೋಷದಲ್ಲಿ ಪಾದ್ರಿಯ ಸ್ವರ ಅಡಗಿ, ಅಲ್ಲಿಂದ ಕಾಲುಕಿತ್ತನು. "ಈ ಪಾದ್ರಿಯನ್ನು ಹತೋಟಿಗೆ ತರಲು ನಾವು ಹೆದರುತ್ತಿದ್ದೆವು" ಎಂದು ಅರ್ಚಕರೂ ಭಕ್ತರೂ ಪ್ರೇಮಾನಂದರ ಧೈರ್ಯವನ್ನು ಕೊಂಡಾಡಿದರು. 'ಅಯ್ಯೋ, ನಾನು ಹಾಗೇಕೆ ಮಾಡಿದೆ' ಎಂದು ಪ್ರೇಮಾನಂದರೇ ತರುವಾಯದಲ್ಲಿ ಬೇಜಾರುಪಟ್ಟುಕೊಂಡರು.

## ಬೇಲೂರುಮಠದ ತಾಯಿ

ಬೇಲೂರುಮಠ ಸ್ಥಾಪನೆಯಾದ ಮೇಲೆ (೧೮೯೮) ಪ್ರೇಮಾನಂದರು ಅದರ ನಿರ್ವಹಣೆಯ ಹೊಣೆಗಾರಿಕೆಯನ್ನು ಹೊರಬೇಕಾಯಿತು. ಅಲ್ಲಿ ಅದ್ಭುತವಾದ ದಿನಚರಿ ಅವರದಾಗಿತ್ತು. ಬೆಳಗಿನ ಬ್ರಾಹ್ಮೀಮುಹೂರ್ತದ ಮೂರುಗಂಟೆಯಿಂದ ರಾತ್ರಿ ಹನ್ನೊಂದರವರೆಗೆ ಬಹುಬಗೆಯ ಕಾರ್ಯಗಳಲ್ಲಿ ತಲ್ಲೀನರಾಗುತ್ತಿದ್ದರು. ಆ ದಿನಚರಿಯಲ್ಲಿ ಸದ್ಗುರುವಿನ ನಿತ್ಯಪೂಜೆ, ಧ್ಯಾನ, ಭಜನೆ, ಗಂಗಾಪೂಜೆ, ಮಠಕ್ಕೆ ಬರುವ ಭಕ್ತವೃಂದವನ್ನು ಉಪಚರಿಸುವುದು, ಅನಾರೋಗ್ಯಕ್ಕೆ ತುತ್ತಾದ ಸಂನ್ಯಾಸಿಗಳ ಯೋಗಕ್ಷೇಮ ನೋಡಿಕೊಳ್ಳುವುದು, ಪಾಕಶಾಲೆ, ಗೋಶಾಲೆ, ಕೈತೋಟಗಳ ಉಸ್ತುವಾರಿ ನೋಡಿಕೊಳ್ಳುವುದು, ಬ್ರಹ್ಮಚಾರಿಗಳಿಗೆ ವೇದಾಂತಪಾಠಗಳನ್ನು ಹೇಳಿಕೊಡುವುದು, ಚಿಂತನಮಂಥನ ನಡೆಸುವುದು, ಕಾಗದಪತ್ರಗಳಿಗೆ ಉತ್ತರಕೊಡುವುದು, ಯಾರಾದರೂ ಭಕ್ತರು ರಾತ್ರಿ ಮಠದಲ್ಲಿಯೇ ಉಳಿದರೆ ಅವರಿಗೆ ಭೋಜನ, ಹಾಸುಗೆ, ಸೊಳ್ಳೆಪರದೆ ಮೊದಲಾದ ಸೌಕರ್ಯಗಳನ್ನು ಒದಗಿಸಿಕೊಡುವುದು ಮೊದಲಾದ ಕಾರ್ಯಗಳು ಸೇರಿರುತ್ತಿದ್ದುವು. ಅವುಗಳ ಜೊತೆಗೆ ಪರಸ್ಥಳಗಳಿಗೆ ಹೋಗಿ ಪ್ರವಚನ ನೀಡುವುದು, ಮಠದ ನಿರ್ವಹಣೆಗೆ ಕಾಣಿಕೆ ಸಂಗ್ರಹಿಸುವುದೂ ನಡೆಯುತ್ತಿದ್ದುವು. ಅವರ ಪ್ರೇಮಪೂರ್ಣವಾದ ವ್ಯಕ್ತಿತ್ವವು ಸರ್ವರನ್ನೂ ಸೂಜಿಗಲ್ಲಿನಂತೆ ಸೆಳೆಯುತ್ತಿತ್ತು. ಆ ವ್ಯಕ್ತಿತ್ವದಿಂದಾಗಿಯೇ ಅವರು ಬೇಲೂರುಮಠದ ತಾಯಿಯೆನಿಸಿದ್ದರು.